



ಅರುಣ ಪಿ. ಭಟ್ಟ

## ವಾರಭವಿಷ್ಯ: 05.02.2026ರಿಂದ 11.02.2026ರವರೆಗೆ




ಸಾಮಾಜಿಕವಾಗಿ ಮಾನ ಸನ್ಮಾನ ಯೋಗವಿದೆ. ದೇವಾಲಯ ತೀರ್ಥಕ್ಷೇತ್ರ ದರ್ಶನ ಮಾಡುವಿರಿ. ಮನೆಗೆ ನೆಂಟರಿಷ್ಟರ ಆಗಮನದಿಂದ ಸಂತಸದ ವಾತಾವರಣ ಕಂಡುಬರುತ್ತದೆ. ಆರ್ಥಿಕವಾಗಿ ಆದಾಯವು ಹೆಚ್ಚಾಗುವ ಸಾಧ್ಯತೆ ಇದೆ. ನಿರೀಕ್ಷಿತ ಕಾರ್ಯಗಳು ಸರಾಗವಾಗಿ ನಡೆಯಲಿವೆ. ಬಾಕಿ ಹಣ ಬರುವ ಸಾಧ್ಯತೆಗಳಿವೆ. ವ್ಯಾಪಾರಸ್ಥರಿಗೆ ಉತ್ತಮ ಆದಾಯ. ಶುಭದಿನ: 06. ಲಕ್ಷ್ಮೀನರಸಿಂಹ ಸ್ತೋತ್ರ ಜಪಿಸಿರಿ.




ನಿಮ್ಮ ಕೆಲಸ ಕಾರ್ಯಗಳು ದೈವ ಪ್ರೇರಣೆಯಿಂದ ಸುಲಭವಾಗಿ ನಡೆಯುತ್ತದೆ. ಕೆಲವು ವೈಯಕ್ತಿಕ ಸಮಸ್ಯೆಗಳನ್ನು ಕುಟುಂಬದೊಡನೆ ಚರ್ಚಿಸಿ ಪರಿಹಾರ ಹುಡುಕುವುದು ಒಳಿತು. ಮಾನಸಿಕ ಸಂಬಂಧಿತ ಸಮಸ್ಯೆಗಳಲ್ಲಿ ಬಳಲುವ ಸಾಧ್ಯತೆ ಇದೆ. ಸಹವರ್ತಿಗಳಿಂದ ಉದ್ಯೋಗದಲ್ಲಿ ಅಪವಾದಗಳಿಗೆ ಗುರಿಯಾಗುವ ಸಾಧ್ಯತೆ ಕಾಣಬಹುದು. ಶುಭದಿನ: 08. ಹನುಮಾನ್ ಚಾಲೀಸ್ ಓದಿರಿ.




ಯಶಸ್ವಿಯಾಗಿ ಕಾರ್ಯಗಳನ್ನು ನಿಮ್ಮಂತೆ ಮಾಡಿಕೊಳ್ಳುವಿರಿ. ಕೊಟ್ಟಿರುವ ಕೆಲಸವನ್ನು ಪೂರ್ಣಗೊಳಿಸುವ ಸಾಧ್ಯತೆಯಿದೆ. ಮನಸ್ಸಿನಲ್ಲಿ ಉದ್ಭವವಾಗುವ ಆಸೆ ಆಮಿಷಗಳನ್ನು ನಿಯಂತ್ರಣದಲ್ಲಿಡುವುದು ಸೂಕ್ತ. ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಸಂಗಾತಿ ನಿಮ್ಮ ಯೋಜನೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಉತ್ತಮ ರೀತಿಯ ವಿಷಯಗಳನ್ನು ತಿಳಿಸಿಕೊಡುವ ಸಾಧ್ಯತೆಯಿದೆ. ಶುಭದಿನ: 09. ವಿಷ್ಣು ಸಹಸ್ರನಾಮ ಪಠಿಸಿರಿ.




ಕೆಲಸದಲ್ಲಿ ಪ್ರಬುದ್ಧತೆ ಮೆರೆಯಿರಿ. ಶಿಸ್ತು ಮತ್ತು ಸಂಯಮದಿಂದ ಜೀವನ ಕಟ್ಟಿಕೊಳ್ಳುವ ಪ್ರಯತ್ನ ಸಾಗಲಿ. ನಿಮ್ಮಲ್ಲಿನ ವಿಶೇಷ ಪ್ರತಿಭೆಗಳಿಗೆ ಸೂಕ್ತ ವೇದಿಕೆ ದೊರೆಯುವುದು. ಪ್ರಮುಖ ಕಾರ್ಯಗಳನ್ನು ಮಾಡಿ ಮುಗಿಸುವಿರಿ. ವಾಹನ ಕ್ರಯ ವಿಕ್ರಯ ಯೋಗವಿದೆ. ಆಸ್ತಿ ಖರೀದಿ ಆಭರಣ ಖರೀದಿಗೆ ಸಕಾಲ. ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ: 07. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಕಾಲ ಬರಲಿ ಎಂದು ಸುಮ್ಮನೆ ಕೂರಬೇಡಿ. ಕೆಲಸದ ಬಗ್ಗೆ ಆದಷ್ಟು ಪರಿಶ್ರಮ ಪಡುವುದು ಒಳ್ಳೆಯದು. ನಿರೀಕ್ಷಿತ ಆದಾಯಗಳು ಈ ವಾರ ನಿಮ್ಮ ಕೈ ಸೇರುವ ಸಾಧ್ಯತೆ ಇದೆ. ಕುಟುಂಬದ ಕೆಲವು ವಿಚಾರಗಳಿಂದ ಮಾನಸಿಕ ತೊಂದರೆ ಅನುಭವಿಸುವಿರಿ. ಯೋಜನೆಗಳಲ್ಲಿ ಇತರರ ಹಸ್ತಕ್ಷೇಪದಿಂದ ಹಿನ್ನಡೆಯಾಗಬಹುದು. ಮಾನಸಿಕ ಸ್ಥಿರತೆಯನ್ನು ಕಾಪಾಡಿಕೊಳ್ಳಿ. ಶುಭದಿನ: 08. ಸೌಂದರ್ಯ ಲಹರಿ ಪಠಿಸಿರಿ.




ಮಾಡುವ ಕೆಲಸದಲ್ಲಿ ಟೀಕೆಗಳು ಬರಬಹುದು. ನಿಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವುದು ಮುಖ್ಯ. ಸಹೋದರರೊಡನೆ ವೈಚಾರಿಕ ಭಿನ್ನಮತ ಉಂಟಾಗಬಹುದು. ಅಂದುಕೊಂಡ ಕೆಲಸಗಳು ಮಂದಗತಿಯಲ್ಲಿ ನಡೆಯಬಹುದು. ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಬಡ್ತಿ ಹಾಗೂ ವೇತನ ಹೆಚ್ಚಳವನ್ನು ನಿರೀಕ್ಷೆ ಮಾಡಬಹುದು. ಯಾರ ಜತೆಗೂ ಜಗಳ ಮಾಡಬೇಡಿ. ಶುಭದಿನ: 06. ಲಿಂಗಾಷ್ಟಕ ಪಠಿಸಿರಿ.




ಸಂತೋಷದಿಂದ ಕಾರ್ಯಗಳನ್ನು ಮಾಡಲು ಮುಂದಾಗಿ. ಆರೋಗ್ಯದ ವಿಷಯವಾಗಿ ಜಾಗ್ರತೆ ವಹಿಸುವುದು ಸೂಕ್ತ. ಕುಟುಂಬದಲ್ಲಿ ಉದ್ಭವವಾಗುವ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಿ. ಸುಖಾಸುಮ್ಮನೆ ಕೋಪಾವೇಷ ವ್ಯಕ್ತಪಡಿಸುವುದು ಒಳಿತಲ್ಲ. ಉದ್ಯೋಗ ಸ್ಥಳದಲ್ಲಿ ಸ್ವಲ್ಪ ಮಟ್ಟಿಗೆ ಒತ್ತಡ ಕಾಣಿಸಿಕೊಳ್ಳಬಹುದು. ಆರೋಗ್ಯದಲ್ಲೂ ಏರುಪೇರಾಗುತ್ತದೆ. ಶುಭದಿನ: 07. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಅಪರೂಪದ ವ್ಯಕ್ತಿಗಳನ್ನು ಭೇಟಿಯಾಗುತ್ತೀರಿ. ಈ ವಾರ ಲವಲವಿಕೆಯಿಂದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಸೂಕ್ತ. ಮಕ್ಕಳ ಉದ್ಯೋಗದ ಬಗ್ಗೆ ಚಿಂತೆ ಆವರಿಸಬಹುದು. ಹಳೆಯ ನೆನಪುಗಳು ಬಹು ಕಾಡಲಿವೆ. ಅಧ್ಯಾತ್ಮದ ವಿಚಾರ ಬಗ್ಗೆ ಗಮನ ಹರಿಸುವಿರಿ. ವಿವಿಧ ಆದಾಯ ಮೂಲಗಳಿಂದ ಅನುಕೂಲ ಒದಗಿ ಬರಲಿದೆ. ಶುಭದಿನ: 09. ಶಿವಕವಚ ಪಠಣ ಮಾಡಿರಿ.




ವಿದೇಶ ಪ್ರವಾಸದ ಯೋಜನೆ ಸಕಾರಾತ್ಮಕವಾಗಿ ನಡೆಯಬಹುದು. ಆಸ್ತಿ ಮಾರಾಟದ ವಿಷಯದಲ್ಲಿ ಶುಭ ಫಲಿತಾಂಶ ಕಾಣಬಹುದು. ಮಕ್ಕಳ ಪ್ರಗತಿಗಾಗಿ ಹೆಚ್ಚಿನ ಹಣ ಖರ್ಚಾಗುವ ಸಾಧ್ಯತೆ. ಸಾಮಾಜಿಕ ಕ್ಷೇತ್ರದಲ್ಲಿ ಹಿನ್ನಡೆ ಕಂಡುಬರುತ್ತದೆ. ಬಾಕಿ ಇರುವ ನಿಮ್ಮ ಹಲವು ಕೆಲಸಗಳಿಗೆ ಈ ವಾರ ಪರಿಹಾರ ಸಿಗಲಿದೆ. ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ಶುಭದಿನ: 08. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಓದಿನ ಕಡೆಗೆ ಉತ್ಸಾಹ ಹೆಚ್ಚಾಗುತ್ತದೆ. ಕೆಲವರ ಬಗ್ಗೆ ಈ ವಾರ ನಿಮಗೆ ಅನುಮಾನ ಮೂಡುವ ಸಾಧ್ಯತೆ ಕಾಣಬಹುದು. ಕೆಲಸದಲ್ಲಿ ಹೆಚ್ಚುವರಿ ಜವಾಬ್ದಾರಿ ನಿಮಗೆ ಸಿಗುವುದು. ಕನಸುಗಳನ್ನು ನನಸು ಮಾಡಿಕೊಳ್ಳುವ ಪ್ರಯತ್ನ ನಿಮ್ಮಿಂದ ಬೇಕಾಗಿದೆ. ಅನಿರೀಕ್ಷಿತ ಪ್ರಯಾಣ ಮಾಡುವ ಸಾಧ್ಯತೆ ಕಾಣಬಹುದು. ಮಕ್ಕಳ ವಿಷಯದಲ್ಲಿ ಹೆಮ್ಮೆ ಮೂಡುವುದು ನಿಶ್ಚಿತ. ಶುಭದಿನ: 10. ನವದುರ್ಗಾ ಆರಾಧನೆ ಮಾಡಿರಿ.




ಆರೋಗ್ಯ ಉತ್ತಮವಾಗಿರುತ್ತದೆ. ಆ ಕಾರಣಕ್ಕೆ ನೀವೂ ಸಂತೋಷವಾಗಿರುತ್ತೀರಿ. ಸದ್ಯಕ್ಕೆ ನೀವು ಎದುರಿಸುತ್ತಿರುವ ಬಿಕ್ಕಟ್ಟುಗಳು ನಿವಾರಣೆ ಆಗುತ್ತವೆ. ನಿಮ್ಮ ಸಾಮರ್ಥ್ಯ ಹಾಗೂ ಒಟ್ಟಾರೆ ಆಲೋಚನೆಯಲ್ಲಿ ಸಕಾರಾತ್ಮಕ ಪ್ರಗತಿ ಕಾಣಿಸಿಕೊಳ್ಳುತ್ತದೆ. ದೈಹಿಕ ಸದೃಢತೆ ಬಗ್ಗೆ ಹೆಚ್ಚಿನ ಗಮನ ನೀಡುವ ಸಾಧ್ಯತೆ ಇದೆ. ನಿಮ್ಮ ಶಕ್ತಿ– ಚೈತನ್ಯ ಹೆಚ್ಚಾಗುತ್ತದೆ. ಶುಭದಿನ: 11. ಶನಿಸ್ತೋತ್ರ ಪಠಿಸಿರಿ.




ಸಂಬಂಧಿಕರಿಂದ ಶುಭ ಸುದ್ದಿಯನ್ನು ಕೇಳುತ್ತೀರಿ. ಈವರೆಗಿನ ಬಿಕ್ಕಟ್ಟು ಸಮಸ್ಯೆಗಳು ಶಮನವಾಗುತ್ತವೆ. ಕನಿಷ್ಠ ಪಕ್ಷ ಪರಿಸ್ಥಿತಿಯಲ್ಲಿ ಸುಧಾರಣೆ ಕಾಣಿಸುತ್ತದೆ. ಮಾನಸಿಕ ದೃಢತೆ ಹೆಚ್ಚಲಿದೆ. ನಿಮ್ಮ ವಿರೋಧಿಗಳನ್ನು ಈ ಅವಧಿಯಲ್ಲಿ ಮಣಿಸುತ್ತೀರಿ. ಹೂಡಿಕೆ ಲಾಭದಾಯಕವಾಗಿ ಇರುತ್ತದೆ. ಉದ್ಯೋಗ ಜೀವನದಲ್ಲಿ ಯಶಸ್ಸು ನಿಮ್ಮ ಪಾಲಿಗೆ ದೊರೆಯಲಿದೆ. ಶುಭದಿನ: 09. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.